ದಿನಾಂಕಃ **15.02.2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟಿ ಸವಾಲುಃ ಪ್ರತಿವಾದಿ ಪರ ಶ್ರೀ ಯು ಜಿ ವಕೀಲರಿಂದಃ

ನನಗೆ ಕನ್ನಡ ಅಷ್ಟೊಂದು ಓದಲು ಬರುವುದಿಲ್ಲ. ನ್ಯಾಯಾಲಯದಲ್ಲಿ ಸಲ್ಲಿಸಿದ ಪ್ರಮಾಣ ಪತ್ರದಲಿಲ ಬರೆದಿರುವ ಸಂಗತಿಗಳು ನನಗೆ ಗೊತ್ತು. ಅದನ್ನು ಓದಿ ತಿಳಿದುಕೊಂಡಿರುತ್ತೇನೆ. ನನ್ನ ತಂದೆಗೆ ಇವಾಗ ಆರೋಗ್ಯ ಸರಿ ಇರುವುದಿಲ್ಲ.

ನಿಪಿ-1 ನ್ನು ನನ್ನ ತಂದೆಯವರು ಸೊರಬ ನ್ಯಾಯಾಲಯಕ್ಕೆ ಬಂದು ಬರೆದುಕೊಟ್ಟಿರುತ್ತಾರೆ. ನಿಪಿ-2 ರಿಂದ 5 ರ ದಾಖಲಾತಿಗಳಲ್ಲಿ ನನ್ನ ತಂದೆಯ ಅಥವಾ ನನ್ನ ಹೆಸರು ನಮೂದು ಇರುವುದಿಲ್ಲ. ದಾವಾ ಸರ್ವೆ ನಂಬರ್ ನ ಚಾಲ್ತಿ ಸಾಲಿನ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿರುತ್ತೇನೆ. ಸಾಕ್ಷಿಗೆ ತಾನು ಹಾಜರುಪಡಿಸಿದ ದಾಖಲಾತಿಗಳನ್ನು ತೋರಿಸಿ, ಅದರಲ್ಲಿ ಚಾಲ್ತಿ ಸಾಲಿನ ಪಹಣಿ ಪತ್ರಿಕೆ ಇದೆಯಾ ಎಂಬ ಪ್ರಶ್ನೆಗೆ ಸಾಕ್ಷಿ ಹಾಜರುಪಡಿಸಿಲ್ಲ ಎಂದು ಉತ್ತರಿಸುತ್ತಾರೆ. ಸಾಕ್ಷಿಗೆ ಚಾಲ್ತಿ ಸಾಲಿನ ದಾವಾ ಸರ್ವೆ ನಂಬರಿನ ಪಹಣಿ ಪತ್ರಿಕೆಯನ್ನು ತೋರಿಸಲಾಗಿ, ಅದು ನೋಡಿ ಒಪ್ಪಿರುವುದರಿಂದ ನಿಡಿ-1 ಎಂದು ಗುರುತಿಸಲಾಯಿತು. ಸದರಿ ನಿಡಿ-1 ಚಾಲ್ತಿ ಸಾಲಿನ ಪಹಣಿ ಪತ್ರಿಕೆಯಲ್ಲಿ ಭಾಗ್ಯಮ್ಮ, ಕೊಳ್ಳಿಯಮ್ಮ ಮತ್ತು ಜಯರಾಮ ಎಂದು ಹೆಸರು ನಮೂದು ಇದ್ದು, ಅದರಲ್ಲಿ ನಿಮ್ಮ ತಂದೆಯ ಹೆಸರು ನಮೂದು ಇಲ್ಲ ಅಂದರೆ ಸರಿ. ನಿಪಿ-18 ರಿಂದ 20 ದಾಖಲಾತಿಗಳನ್ನು ಓದಿ ತಿಳಿದುಕೊಂಡಿರುತ್ತೇನೆ. ನಿಪಿ-18 ರಲ್ಲಿ ತಹಸೀಲ್ದಾರವರಿಗೆ, ನಿಪಿ-19 ರಲ್ಲಿ ಜಿಲ್ಲಾಧಿಕಾರಿಯವರಿಗೆ ಹಾಗೂ ನಿಪಿ-20 ರಲ್ಲಿ ಉಪವಿಭಾಗಾಧಿಕಾರಿಗಳಿಗೆ ನನ್ನ ತಂದೆಯವರು ದಾವಾ ಸರ್ವೆ ನಂಬರಿನಲ್ಲಿ ಸಾಗುವಳಿ ಮಾಡುತ್ತಿದ್ದ ಜಮೀನನ್ನು ಊರಿನವರಿಂದ ಬಿಡಿಸಿಕೊಡಿ ಎಂದು ಅರ್ಜಿ ಸಲ್ಲಿಸಿರುತ್ತಾರೆ ಅಂದರೆ ಸರಿ. ದಾವಾ ಸರ್ವೆ ನಂಬರಿನಲ್ಲಿ ಈಗ ನಾಡಕಛೇರಿ ಸರ್ಕಾರಿ ಕಟ್ಟಡ ನಿರ್ಮಿಸಿರುತ್ತಾರೆ ಅಂದರೆ

ಸಾಕ್ಷಿ ಅದು ನಮ್ಮ ಜಾಗ ಅಲ್ಲ ಎಂದು ಉತ್ತರಿಸುತ್ತಾರೆ. ನಿಡಿ-1 ರಲ್ಲಿ ಅದು ನಮೂದು ಆಗಿರುತ್ತದೆ ಅಂದರೆ ಅದು ನಮ್ಮ ಜಾಗ ಅಲ್ಲ ಎಂದು ಉತ್ತರಿಸುತ್ತಾರೆ. ನಿಡಿ-1 ರಲ್ಲಿ ಭಾಗ್ಯಮ್ಮ, ಕೊಳ್ಳಿಯಮ್ಮ ಮತ್ತು ಜಯರಾಮ ರವರಿಗೆ ಮಂಜೂರಾಗುವ ಸಮಯದಲ್ಲಿ ಕಂದಾಯ ಇಲಾಖೆಯವರು ಮಹಜರ್ ಮಾಡಿಸಿರುತ್ತಾರೆ ಅಂದರೆ ಸರಿ. ಸದರಿ ಮಹಜರ್ ನಲ್ಲಿ ಮೇಲೆ ನಮೂದಿಸಿದ ಮೂರು ಜನರನ್ನು ಬಿಟ್ಟು ಬೇರೆ ಯಾರು ಸಾಗುವಳಿ ಮಾಡುತ್ತಿಲ್ಲ ಅಂದರೆ ಸಾಕ್ಷಿಯು ಆಗ ನನ್ನ ತಂದೆಯವರು ಸಾಗುವಳಿ ಮಾಡುತ್ತಿದ್ದರು ಎಂದು ಉತ್ತರಿಸುತ್ತಾರೆ. ನಿಪಿ-18 ರಿಂದ 20 ರವರೆಗೆ ಅರ್ಜಿ ಸಲ್ಲಿಸಿದ ಮೇರೆಗೆ ಮಾನ್ಯ ತಹಸೀಲ್ದಾರವರು, ಜಿಲ್ಲಾಧಿಕಾರಿಗಳು ಹಾಗೂ ಉಪವಿಭಾಗಾಧಿಕಾರಿಗಳು ಕ್ರಮ ಅಥವಾ ಜಮೀನನ್ನು ಬಿಡಿಸಿಕೊಳ್ಳಲು ಪ್ರಯತ್ನಿಸಿದ್ದರಾ ಎಂದರೆ ಸಾಕ್ಷಿಯು ನ್ಯಾಯಾಲಯದಿಂದ ಆದೇಶ ಪಡೆದುಕೊಂಡು ಸ್ವಾಧೀನವನ್ನು ಪಡೆದುಕೊಳ್ಳಿ ಎಂದು ಉತ್ತರಿಸುತ್ತಾರೆ. ಸಾಕ್ಷಿಗೆ ಒಂದು ಭಾವಚಿತ್ರವನ್ನು ತೋರಿಸಲಾಗಿ, ಅದರಲ್ಲಿ ಇರುವ ರಸ್ತೆಯು ಉಳವಿಯಿಂದ ಕಾನಹಳ್ಳಿಗೆ ಹೋಗುವ ರಸ್ತೆ ಇದ್ದು, ಅದರಲ್ಲಿ ಕಾಣಿಸುವ ಒಂದು ಮನೆ ಸಾಕ್ಷಿದಾರರು ತಮ್ಮದು ಎಂದು ಉತ್ತರಿಸುತ್ತಾರೆ. ಆದ ಕಾರಣ ಅದನ್ನು ನಿಡಿ-2 ಎಂದು ಗುರುತಿಸಲಾಯಿತು. ಸಾಕ್ಷಿಗೆ ಇನ್ನೊಂದು ಭಾವಚಿತ್ರವನ್ನು ತೋರಿಸಲಾಗಿ ಸ.ನಂ.48 ರಲ್ಲಿರುವ ನಾಡಕಛೇರಿಯನ್ನು ಕಟ್ಟಿಸಿದ ಜಮೀನು ಎಂದು ಉತ್ತರಿಸುತ್ತಾರೆ. ಆದ ಕಾರಣ ಅದನ್ನು ನಿಡಿ-3 ಎಂದು

ಗುರುತಿಸಲಾಯಿತು. ನಿಡಿ-3 ರಲ್ಲಿ ಕಾಣುವ ಒಂದು ತಗಡಿನ ಮೇಲ್ಛಾವಣಿ ಇರುವ ಶೆಡ್ ನಲ್ಲಿ ಪಹಣಿ ವಿತರಿಸುವ ಕೌಂಟರ್ ಇದೆ ಅಂದರೆ ಸರಿ. ಸಾಕ್ಷಿಗೆ ಇನ್ನೊಂದು ಛಾಯಾಚಿತ್ರವನ್ನು ತೋರಿಸಲಾಗಿ ಅದರಲ್ಲಿ ಕಾಣುವ ನಾಡಕಛೇರಿಯ ಕಿಡಕಿ ಹಾಗೂ ಕರಿಬಣ್ಣದಿಂದ ಮುಚ್ಚಿ ಇಟ್ಟ ಮಾರಿಕಾಂಬ ದೇವಿಯ ರಥದ ವಸ್ತುಗಳನ್ನು ಮುಚ್ಚಿಟ್ಟಿರುತ್ತಾರೆ ಎಂದರೆ ಸರಿ. ಆದ ಕಾರಣ ಅದನ್ನು ನಿಡಿ-4 ಎಂದು ಗುರುತಿಸಲಾಯಿತು. ಸ.ನಂ.48 ರಲ್ಲಿ 2016-17 ಸಾಲಿನಲ್ಲಿ ಮಂಜೂರಾದ ಬಗರ್ ಹುಕುಂ ಜಮೀನಿನ ಹಕ್ಕು ಪತ್ರವನ್ನು ನೀಡಿರುತ್ತಾರೆ ಅಂದರೆ ಸರಿ. ಆಗ ನನ್ನ ತಂದೆಯವರು ಹಕ್ಕು ಪತ್ರವನ್ನು ಪಡೆದುಕೊಂಡಿರುವುದಿಲ್ಲ. ದಾವಾ ದಾಖಲಿಸಿದ ನಂತರ ಹಕ್ಕು ಪತ್ರ ಪಡೆಯಲು ನಾನು ಪ್ರಯತ್ನಿಸಿರುತ್ತೇನೆ. ನಿಪಿ-25 ಕ್ಕೆ ಸಂಬಂಧಿಸಿದ ಹಕ್ಕು ಪತ್ರ ಪಡೆಯಲು ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ನಾಡಕಛೇರಿಯ ಹಿಂದಿನ ಭಾಗ ದರಕಾಸ್ತು ಮಂಜೂರು ಆಗಿರುತ್ತದೆ ಎಂಬುದು ನಮ್ಮ ವಾದವಾಗಿರುತ್ತದೆ. ನಾನು ಸ್ವಾಧೀನಾನುಭವದಲ್ಲಿ ಇರುವ ಬಗ್ಗೆ ಹಾಗೂ ದಾವೆಯಲ್ಲಿ ನಮೂದಿಸಿದ ಚೆಕ್ಕು ಬಂದಿಯ ಬಗ್ಗೆ ಪುರಾವೆಪಡಿಸಲು ಯಾವುದೇ ದಾಖಲಾತಿಗಳನ್ನು ಹಾಜರುಡಿಸಿರುವುದಿಲ್ಲ. ಸ.ನಂ.48 ರಲ್ಲಿ ನಿಡಿ-1 ರಲ್ಲಿ ನಿಮ್ಮ ತಂದಗೆ ಮಂಜೂರಾದ ಜಮೀನುಗಳಿಗೆ ಪ್ರತಿವಾದಿಯವರು ಯಾವಾಗಲೂ ತೊಂದರೆ ಕೊಟ್ಟಿಲ್ಲ ಅಂದರೆ ಸರಿ. ದರಕಾಸ್ತಿಯಲ್ಲಿ ಮಂಜೂರಾಗಿದ್ದು ಹಾಗೂ ನೀವು ಸ್ವಾಧೀನಾನುಭಾದಲ್ಲಿ ಇರುತ್ತೇವೆ ಎಂದರೆ ಸುಳ್ಳು. ಪ್ರತಿವಾದಿಯವರು ನಿಮ್ಮ

ತಂದೆಗೆ ಮಂಜೂರಾಗಿದೆ ಎಂದು ಹೇಳುವ ಜಮೀನಿಗೆ ಯಾವುತ್ತೂ ಕೂಡ ತೊಂದರೆ ನೀಡಿಲ್ಲ ಅಂದರೆ ಸರಿಯಲ್ಲ. ದಾವಾ ಸ.ನಂ.48 ರಲ್ಲಿ ನಿಮಗೆ ಮಂಜೂರಾದ ಜಮೀನುಗಳಲ್ಲಿ ಮಾತ್ರ ಸ್ವಾಧೀನಂದಲ್ಲಿ ಇದ್ದು, ನಾಡಕಛೇರಿಯ ಹಿಂಭಾಗದ ಜಾಗದಲ್ಲಿ ನಿಮಗೆ ಸ್ವಾಧೀನ ಇಲ್ಲ ಅಂದರೆ ಸರಿಯಲ್ಲ. ನಾಡಕಛೇರಿಯ ಹಿಂಭಾಗದ ಜಾಗವನ್ನು ತಹಸೀಲ್ದಾರವರು ಸಾರ್ವಜನಿಕ ಉದ್ದೇಶಕ್ಕಾಗಿ ಖಾಯ್ದಿರಿಸಿದ್ದಾರೆ ಅಂದರೆ ಸರಿಯಲ್ಲ. ನೀವು ಕಣಿಸಿರುವ ದಾವಾ ಚೆಕ್ಕು ಬಂದಿ ಸ್ಥಳದಲ್ಲಿ ಇಲ್ಲ ಅಂದರೆ ಸರಿಯಲ್ಲ. ನಿಡಿ-4 ರಲ್ಲಿ ಕಾಣುವ ಮಾರಿಕಾಂಬ ದೇವಿಯ ರಥದ ವಸ್ತುಗಳನ್ನು ಟಾರ್ ಪೋಲಿನಿಂದ ಕಟ್ಟಿರುತ್ತಾರೆ ಅಂದರೆ ಸರಿಯಲ್ಲ. ಪ್ರತಿವಾದಿಯವರಿಗೆ ತೊಂದರೆ ಕೂಡುವ ಉದ್ದೇಶದಿಂದ ಮತ್ತು ಸರ್ಕಾರದ ಜಾಗವನ್ನು ಕಬಳಿಸುವ ಉದ್ದೇಶದಿಂದ ನೀವು ಸುಳ್ಳು ದಾವೆಯನ್ನು ಸಲ್ಲಿಸಿರುತ್ತೀರಿ ಅಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

**(**ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಕಂಪ್ಯೂಟರೀಕರಿಸಲಾಯ್ತು**).**

ಓ.ಹೇ.ಕೇ. ಸರಿ ಇದೆ ಎಂದು ಒಪ್ಪಿದ್ದಾರೆ.

ಪ್ರಧಾನ ವ್ಯವಹಾರ ನ್ಯಾ. ಮತ್ತು ಜೆ.ಎಂ.ಎಫ್.ಸಿ
ಸೊರಬ.